© 2023 IJNRD | Volume 8, Issue 7 July 2023 | ISSN: 2456-4184 | IJNRD.ORG

IJNRD.ORG ISSN : 2456-4184
INTERNATIONAL JOURNAL OF NOVEL RESEARCH AND DEVELOPMENT (IJNRD) | IJNRD.ORG
An International Open Access, Peer-reviewed, Refereed Journal

# ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆ ಕೊತ್ತವಳ್ಳಿ

ಡಾ.ಅರುಣ ಕುಮಾರ ಹೆಚ್.ಆರ್
ಉಪನ್ಯಾಸಕರು ಇತಿಹಾಸ ವಿಭಾಗ
ಜ್ಞಾನಕಾವೇರಿ ಸ್ನಾತಕೋತ್ತರ ಕೇಂದ್ರ
ಚಿಕ್ಕ ಅಳುವಾರ
ಮಂಗಳೂರು ವಿಶ್ವವಿದ್ಯಾನಿಲಯ

ಡಾ. ಚಂದ್ರಯ್ಯ
ಉಪನ್ಯಾಸಕರು ಇತಿಹಾಸ ವಿಭಾಗ
ಜ್ಞಾನಕಾವೇರಿ ಸ್ನಾತಕೋತ್ತರ ಕೇಂದ್ರ
ಚಿಕ್ಕ ಅಳುವಾರ
ಮಂಗಳೂರು ವಿಶ್ವವಿದ್ಯಾನಿಲಯ

ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿಗೆ ಸೇರಿರುವ ಕೊತ್ತವಳ್ಳಿ ಒಂದು ಪುಟ್ಟ ಗ್ರಾಮ. ಇದು ಪಿರಿಯಾಪಟ್ಟಣ ತಾಲೂಕು ಕೇಂದ್ರದಿಂದ ಈಶಾನ್ಯ ಭಾಗಕ್ಕೆ ಸುಮಾರು 15 ಕಿ. ಮೀ ದೂರದಲ್ಲಿದೆ. ಈ ಗ್ರಾಮವು ಸಾವಿರಾರು ವರ್ಷಗಳ ಇತಿಹಾಸವನ್ನು ತನ್ನ ಮಡಿಲಲ್ಲಿರಿಸಿಕೊಂಡಿದೆ ಎಂಬುದು ಇಲ್ಲಿ ಕಂಡು ಬರುವ ಬೃಹತ್ ಶಿಲಾಯುಗ ಸಂಸ್ಕೃತಿಯ ಕುರುವುಗಳಿಂದ ತಿಳಿಯಬಹುದಾಗಿದೆ. ಕೊತ್ತವಳ್ಳಿ ಗ್ರಾಮವು ಕೇವಲ ಐತಿಹಾಸಿಕ ಯುಗದಲ್ಲಷ್ಟೆ ಅಲ್ಲದೆ ಪೂರ್ವಯುಗದಲ್ಲೂ ಕೂಡ ತನ್ನದೆ ಆದ ಮಹತ್ವ ಸ್ಥಾನವನ್ನು ಪಡೆದುಕೊಂಡಿದೆ ಎಂಬುದು ಇದರಿಂದ ವಿಧಿತವಾಗುತ್ತದೆ. ಬೃಹತ್ ಶಿಲಾಯುಗದ ಸಂಸ್ಕೃತಿಯ ಸಮಾಧಿಗಳು ಬಹಳ ಬಹಳ ವರ್ಷಗಳಿಂದಂದಲೂ ವಿದ್ವಾಂಸರಲ್ಲಿ ಹಾಗೂ ಸಂಶೋಧಕರಲ್ಲಿ ವಿಶೇಷವಾದ ಆಸಕ್ತಿ ಹಾಗೂ ಕುತೂಹಲವನ್ನು ಕೆರಳಿಸಿವೆ. ಈ ಸಮಾದಿ ನೆಲೆಗಳ ಅಧ್ಯಯನ ವಿದ್ವಾಂಸರಿಗೆ ಮತ್ತು ಸಂಶೋಧಕರಿಗೆ ಆಸಕ್ತಿಕರ ವಸ್ತುವಿಷಯವಾಗಿದೆ.

ಕೊತ್ತವಳ್ಳಿ ಗ್ರಾಮದ ಹೊಲದಪ್ಪ ಅವರ ಒಡ್ಡಗ್ಲ್ ಹೊಲ ಎಂದು ಕರೆಯುವ ಜಮೀನಿನಲ್ಲಿ ಪೂರ್ವ ಇತಹಾಸದ ಮಹತ್ವವನ್ನು ಸಾರುವ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿರುವ ಸಾಲು ನಿಲುಸುಗಲ್ಲುಗಳು ಕಂಡುಬಂದಿವೆ. ಈ ಸಮಾಧಿ ಸ್ಥಳ ಗ್ರಾಮದ ಬೆಟ್ಟದ ತಪ್ಪಲು ಪ್ರದೇಶ ಭಾಗದಲ್ಲಿದೆ.

**ಈ ಸಂಸ್ಕೃತಿಗೆ ಸೇರಿದ ಜನತೆ ಇಲ್ಲಿ ವಾಸಿಸಲು ಅನೇಕ ಕಾರಣಗಳನ್ನು ಗುರ್ತಿಸಬಹುದು.**

- ಕೊತ್ತವಳ್ಳಿ ಮತ್ತು ಅಲ್ಲಿನ ಸುತ್ತ–ಮುತ್ತಲಿನ ಪ್ರದೇಶ ಫಲವತ್ತಾದ ಮಣ್ಣಿನಿಂದಕೂಡಿದೆ.
- ಇಲ್ಲಿರುವ ಮಣ್ಣು ಕೆಂಪು ಮಣ್ಣಿನಿಂದ ಕೂಡಿದ್ದು ವ್ಯವಸಾಯಕ್ಕೆ ಮತ್ತು ಪೂರ್ವ ಇತಿಹಾಸದ ಬೃಹತ್ ಶಿಲಾಯುಗ ಸಂಸ್ಕೃತಿಯ ಜನ ಗೃಹೋಪಯೋಗಿ ಮಣ್ಣಿನ ಪಾತ್ರೆಗಳನ್ನು ತಯಾರಿಸುವುದಕ್ಕೆ ಯೋಗ್ಯವಾದ ಮಣ್ಣಿನಿಂದ ಕೂಡಿತ್ತು.
- ಈ ಸಂಸ್ಕೃತಿಯ ಜನತೆ ವಾಸಿಸುವುದಕ್ಕೆ ಹಿತಕರವಾದ ವಾತಾವರಣವಿದ್ದು, ಕಾಲಕ್ಕೆ ತಕ್ಕಂತೆ ಮಳೆ ಬೀಳುವ ಪ್ರದೇಶವಾಗಿತ್ತು.
- ಇಲ್ಲಿನ ಸುತ್ತ–ಮುತ್ತಲಿನ ಪ್ರದೇಶ ಹಳ್ಳ–ಕೊಳ್ಳ, ಬೆಟ್ಟ–ಗುಡ್ಡ ಪ್ರದೇಶಗಳಿಂದ ಕೂಡಿದುದರಿಂದ ಈ ಸಂಸ್ಕೃತಿಯ ಜನಸಮೂಹ ಇಲ್ಲಿ ತಮ್ಮ ಅಸ್ತಿತ್ವವನ್ನು ಕಂಡು ಕೊಳ್ಳುವುದಕ್ಕೆ ಸಾಧ್ಯವಾಯಿತು. ಆದುದರಿಂದ ಬೃಹತ್ ಶಿಲಾಯುಗ ಸಂಸ್ಕೃತಿ ಈ ಪ್ರದೇಶದಲ್ಲಿ ಅನೇಕ ವರ್ಷಗಳವರೆಗೆ ನೆಲೆಸಿ ತಮ್ಮ ನೆಲೆಸುವಿಕೆಯ ಕುರುವಾಗಿ ತಮ್ಮ ಅವಧಿಯಲ್ಲಿ ನಿರ್ಮಿಸಿರುವ ನಿಲುಸುಗಲ್ಲು ಸಮಾಧಿಯನ್ನು ಕಾಣಬಹುದು.

ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ್ದ ಸಮಾಧಿಯನ್ನು ಗ್ರಾಮಸ್ಥರು ಒಡ್ಡಗಲ್ಲು, ಪಾಂಡವರ ಕಲ್ಲುಗಳೆಂದು ತಿಳಿದು ಪೂಜಿಸುತ್ತಿದ್ದರು. 2016 ರಲ್ಲಿ ಸಂಶೋಧನೆಯನ್ನು ಕೈಗೊಂಡು ಅಧ್ಯಯನ ನಡೆಸಿದಾಗ ಇದು ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ನೆಲೆ ಎಂದು ಅಲ್ಲಿನ ಸ್ಥಳೀಯರಿಗೆ ಇದರ ಇತಿಹಾಸದ ಮಹತ್ವವನ್ನು ಮನವರಿಕೆ ಮಾಡಿಕೊಡಲಾಯಿತು. ಈ ಗ್ರಾಮದ ಯಜಮಾನನ ಜಮೀನಿನ ಒಂದೇ ಸ್ಥಳದಲ್ಲಿ ಬೃಹದಾಕಾರದ ಆರು ನಿಲುಸುಗಲ್ಲುಗಳನ್ನು ನಿಲ್ಲಿಸಲಾಗಿದೆ. ಈ ನಿಲುಸುಗಲ್ಲುಗಳು ಬೃಹತ್ ಶೀಲಾಯುಗ ಸಂಸ್ಕೃತಿಗೆ ಸೇರಿದ ಜನರ ಸಮಾಧಿ ಪದ್ಧತಿಯನ್ನು ಸೂಚಿಸುವ ಶಿಲಾ ಸ್ಮಾರಕಗಳಾಗಿವೆ.

**ಈ** ಸಂಸ್ಕೃತಿಗೆ ಸೇರಿದ ಒಂದೇ ಕುಟುಂಬದ ಆರು ಜನ ಸದಸ್ಯರು ಯಾವುದೇ ಮಾರಣಾಂತಿಕ ಕಾಯಿಲೆಗೆ ತುತ್ತಾಗಿ ಅಥವಾ ಬೇರೆ ಇನ್ನಾವುದೇ ಕಾರಣದಿಂದ ಮರಣ ಹೊಂದಿದುದರಿಂದ ಅವರ ಧಾರ್ಮಿಕ ವಿಧಿ–ವಿಧಾನಗಳಂತೆ ಶವಸಂಸ್ಕಾರ ಮಾಡಿ ಅವರ ನೆನಪಿಗಾಗಿ ಈ ಬೃಹತ್ ಶಿಲಾ ಸ್ಮಾರಕಗಳು ನೆಟ್ಟು ಸಾಲಾಗಿ ನಿಲ್ಲಿಸಲಾಗಿದೆ. ಈ ಎಲ್ಲಾ ನಿಲುಸುಗಲ್ಲುಗಳು ಪೂರ್ವ–ಪಶ್ಚಿಮವಾಗಿ ಮುಖಮಾಡಿದ್ದು ಅಲ್ಲಿ ಸ್ಥಳೀಯವಾಗಿ ಬೆಟ್ಟ ಗುಡ್ಡಗಳಲ್ಲಿ ದೊರೆಯುವ ಕಲ್ಲನ್ನು ಕತ್ತರಿಸಿ ತಂದು ನಯಮಾಡದೇ ಹಾಗೇ ನಿಲ್ಲಿಸಲಾಗಿದೆ. ಈ ಕಲ್ಲುಗಳು ತಳಭಾಗದಲ್ಲಿ ಅಗಲವಾಗಿದ್ದು ಮೇಲೆ ಹೋದಂತೆ ಕಿರಿದಾಗುತ್ತಾ ಸಾಗಿವೆ. ಇವುಗಳು ಬಿಳಿ ಗ್ರಾನೈಟ್ ಶಿಲೆಗಳಾಗಿದ್ದು ಈ ಕಲ್ಲುಗಳ ಪೈಕಿ ಒಂದು ಭೂಮಟ್ಟದಿಂದ ಒಂಬತ್ತು ಅಡಿ ಎತ್ತರ ಐದು ಅಡಿ ಅಗಲ, ಎರಡು ಕಲ್ಲುಗಳು ನಾಲ್ಕು ಅಡಿ ಎತ್ತರ, ನಾಲ್ಕು ಅಡಿ ಅಗಲ, ಮತ್ತೊಂದು ಕಲ್ಲು ಎರಡು ಅಡಿ ಎತ್ತರ, ಮೂರು ಅಡಿ ಅಗಲ, ಮತ್ತೊಂದು ಕಲ್ಲು ಬಹಳ ಚಿಕ್ಕದಾಗಿ ಒಂದು ಅಡಿ ಎತ್ತರ ಮೂರು ಅಡಿ ಅಗಲವಾಗಿದೆ.

ಕೊತ್ತವಳ್ಳಿ ಗ್ರಾಮದಲ್ಲಿರುವ ಸಾಲು ನಿಲುಸುಗಲ್ಲು ಸಮಾಧಿಗಳು ಗಮನ ಸೆಳೆಯುತ್ತವೆ. ಏಕೆಂದರೆ ಇವು ಇಂಗ್ಲೆಂಡ್‌ನ ವಿಲ್ಟ್‌ಶೈರ್, ಟಿಬೆಟ್, ಫ್ರಾನ್ಸ್‌ನ ಬ್ರಿಟಾನಿಯಾ ಇತರ ರಾಷ್ಟ್ರಗಳಲ್ಲಿ ಕಂಡುಬರುವ ಸಮಾಧಿಗಳಂತೆ ಇರುವುದು ವಿಶೇಷವಾಗಿದೆ.

ಕರ್ನಾಟಕದ ಕಲ್ಬುರ್ಗಿ, ರಾಯಚೂರು, ಚಿತ್ರದುರ್ಗ, ಯಾದಗಿರಿ ಮುಂತಾದ ಕಡೆ ಇದೆ ಮಾದರಿಯ ನಿಲುಸುಗಲ್ಲುಗಳನ್ನು ಕಾಣಬಹುದು, ಹಾಗೆಯೇ ಕೊತ್ತವಳ್ಳಿ ಗ್ರಾಮದಲ್ಲಿರುವಂತೆ ಈ ಗ್ರಾಮದ ನೆರೆಹೊರೆಯ ಗ್ರಾಮಗಳಾದ ಮಳಲಿ, ಬೆಟ್ಟದತುಂಗ, ಬೆಟ್ಟದಪುರ ಮುಂತಾದ ಕಡೆಗಳಲ್ಲೂ ಸಹ ಇದೆ ರೀತಿಯ ನಿಲುಸುಗಲ್ಲು ಸಮಾಧಿ ಸ್ಮಾರಕಗಳನ್ನು ನೋಡಬಹುದು.

ಒಟ್ಟಿನಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಸಮಾಧಿಗಳ ಪೈಕಿ ನಿಲುಸುಗಲ್ಲು ಸಮಾಧಿಯು ಬಹಳ ವಿಶೇಷವಾಗಿದ್ದು ಶಿಲಾಯುಗ ಸಂಸ್ಕೃತಿಯ ಪ್ರಾಮುಖ್ಯತೆ ಮತ್ತು ಮಹತ್ವವನ್ನು ತಿಳಿಸುವ ಪ್ರಮುಖ ಸಾಕ್ಷ್ಯಾಧಾರಗಳಾಗಿವೆ.

ಈ ಪ್ರದೇಶದಲ್ಲಿರುವ ಜನ ನೆರೆಹೊರೆಯ ಪ್ರದೇಶದವರ ಜೊತೆ ನಿಕಟವಾದ ಸಂಪರ್ಕವನ್ನು ಹೊಂದಿರುತ್ತಿರುತ್ತಿದ್ದರು ಹಾಗೂ ಅವರವರ ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳು ಒಂದೇ ರೀತಿಯಾಗಿರುತ್ತಿದ್ದವು ಎಂಬುದಕ್ಕೆ ಬೇರೆ ಪ್ರಾಂತ್ಯಗಳಲ್ಲಿ ದೊರೆತಿರುವ ನಿಲುಸುಗಲ್ಲು ಸಮಾಧಿಗಳು ಒಂದೇ ರೀತಿಯಾಗಿರುವುದೇ ಸಾಕ್ಷಿ.

ಈ ನಿವೇಶನದ ಕಾನಮಾನ ಸರಿಸುಮಾರು ಕ್ರಿ. ಪೂ. 800 ಮತ್ತು ಕ್ರಿ. ಪೂ. 400 ಇದ್ದಿರಬಹುದು.



**ಪರಾಮರ್ಶನ ಗ್ರಂಥಗಳು**


1. ಮೈಸೂರು ಜಿಲ್ಲಾ ಗೆಜೆಟಿಯರ್– ಹಯವದನರಾವ್.ಸಿ–1930
2. ನರಸಿಂಹಮೂರ್ತಿ ಎ.ವಿ –ಕರ್ನಾಟಕ ಪುರಾತತ್ವ ಶೋಧನೆ 1979
3. ಶಿವತಾರಕ್ ಕೆ.ಬಿ, –ಕರ್ನಾಟಕ ಪುರಾತತ್ವ ನೆಲೆಗಳು 2005
4. ಸುಂದರ ಅ.- ಇತಿಹಾಸ ಪೂರ್ವ ಕರ್ನಾಟಕ, ಕನ್ನಡ ವಿ.ವಿ. –1970